# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2047 |
| ಸದಸ್ಯರ ಹೆಸರು | : | ಶ್ರೀಮತಿ ಎಸ್.ವೀಣಾ ಅಚ್ಚಯ್ಯ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.03.2021 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕೊಡಗು ಜಿಲ್ಲೆಯಲ್ಲಿ 2012-13 ರಲ್ಲಿ ಅಕ್ರಮ ಸಕ್ರಮದ ಅಡಿಯಲ್ಲಿ ಎಷ್ಟು ಜನ ರೈತರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ;</td><td>ಕೊಡಗು ಜಿಲ್ಲೆಯಲ್ಲಿ 2012-13 ರಲ್ಲಿ ಅಕ್ರಮ ಸಕ್ರಮದ ಅಡಿಯಲ್ಲಿ 733 ಜನ ರೈತರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ.<br><br>ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ:
<table>
<tr><th>ಕ್ರಮ ಸಂಖ್ಯೆ</th><th>ತಾಲ್ಲೂಕುಗಳು</th><th>ಸಾಗುವಳಿ ಚೀಟಿ ನೀಡಿದ ಸಂಖ್ಯೆ</th></tr>
<tr><td>1</td><td>ಮಡಿಕೇರಿ</td><td>26</td></tr>
<tr><td>2</td><td>ಸೋಮವಾರಪೇಟೆ</td><td>271</td></tr>
<tr><td>3</td><td>ವಿರಾಜಪೇಟೆ</td><td>436</td></tr>
<tr><td></td><td>ಒಟ್ಟು</td><td>733</td></tr>
</table></td></tr>
<tr><td>(ಆ)</td><td>ಈ ರೀತಿ ಸಾಗುವಳಿ ಚೀಟಿಯನ್ನು ಪಡೆದ ಎಷ್ಟು ಜನ ರೈತರ ಹೆಸರಿಗೆ ಆರ್‌ಟಿಸಿ ಬಂದಿದೆ;</td><td>ಸಾಗುವಳಿ ಚೀಟಿಯನ್ನು ಪಡೆದಿರುವ ಎಲ್ಲಾ 733 ರೈತರ ಹೆಸರಿಗೆ ಆರ್.ಟಿ.ಸಿ. ಬಂದಿರುತ್ತದೆ.</td></tr>
<tr><td>(ಇ)</td><td>ಸದರಿ ರೈತರು ಪಡೆದಿರುವ ಆರ್‌ಟಿಸಿ ಗಳನ್ನು ರದ್ದುಪಡಿಸಲಾಗಿದೆಯೇ;</td><td>ಸದರಿ ಪ್ರಕರಣಗಳ ಪೈಕಿ ಅನಧಿಕೃತವಾಗಿ ಮಂಜೂರಾಗಿರುವ 206 ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಕೆ) ರನ್ವಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಪಹಣಿಗಳನ್ನು ರದ್ದುಪಡಿಸಲಾಗಿದೆ.</td></tr>
<tr><td>(ಈ)</td><td>2015-16 ರಲ್ಲಿ ಸದರಿ ಸಾಗುವಳಿ ಚೀಟಿ ಹಾಗೂ ಆರ್‌ಟಿಸಿಗಳನ್ನು ನೀಡಲು ಹೊರಡಿಸಿರುವ ಆದೇಶವನ್ನು ರದ್ದುಪಡಿಸಲಾಗಿದೆಯೇ?</td><td>2015-16 ರಲ್ಲಿ ಸದರಿ ಸಾಗುವಳಿ ಚೀಟಿ ಹಾಗೂ ಆರ್‌ಟಿಸಿಗಳನ್ನು ನೀಡಲು ಆದೇಶ ಹೊಡಿಸಿರುವುದಿಲ್ಲ.</td></tr>
</table>

**(ಕಡತ ಸಂಖ್ಯೆ:ಕಂಇ 8 ಎಲ್‌ಜಿಒ 2021)**

**(ಆರ್.ಅಶೋಕ)**
ಕಂದಾಯ ಸಚಿವರು.